13

# ದೇವರ ಜನರಿಗಾಗಿ ವಿಶೇಷ ಪದಗಳು

ಬೈಬಲ್ ವಿವರಣೆಯನ್ನು ಅವಲಂಭಿಸಿ ಪರಲೋಕವನ್ನು ಚಿತ್ರಿಸಿಕೊಳ್ಳಲು ಎಂದಾದರೂ ಪ್ರಯತ್ನಿಸಿರುವಿರೋ? ಅದು ಬಹುಶಃ ನಾವು ನಿರೀಕ್ಷಿಸಿದ್ದಕ್ಕಿಂತಲೂ ಬಹಳ ಭಿನ್ನವಾದದ್ದಾಗಿರಬಹುದು. ನಮ್ಮ ಪರಲೋಕದ ಮನೆಯು ನಿಶ್ಚಯವಾಗಿಯೂ ನಾವು ಕಲ್ಪಿಸುವದಕ್ಕಿಂತಲೂ ದೊಡ್ಡದಾಗಿರುವುದು. ಹಾಗೂ ಅದನ್ನು ವಿವರಿಸಲು ಉಪಯೋಗಿಸಿದ ಭೂಲೋಕದ ಸಂಕೇತಗಳಾದ ಬಂಗಾರ, ಗಾಜು ಮತ್ತು ಮುತ್ತುಗಳಿಗಿಂತಲೂ ಹೆಚ್ಚು ಮಹಿಮೆಯುಳ್ಳದ್ದಾಗಿರುವುದು.

ದೇವರ ಸಂದೇಶವಾಹಕರು "ರಾಜ್ಯದಂತೆ" ಹಾಗೂ "ಸಭೆಯಂತೆ" ವಿವರಿಸುವದನ್ನು ಚಿತ್ರೀಕರಿಸಲು ಪ್ರಯತ್ನಿಸಿದವರಿಗೂ ಇದೇ ಸತ್ಯವಾಗಿರುತ್ತದೆ. ಈ ಎರಡು ಪದಗಳನ್ನು ಅರ್ಥಮಾಡಿಕೊಳ್ಳದೇ ರಕ್ಷಣೆಯ ದೇವರ ಯೋಜನೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ನಾವು ಬಹುಶಃ ನಿರೀಕ್ಷಿಸಲಾರದಂತೆ ಈ ಪದಗಳು ಬಹಳ ಸಲ ಉಪಯೋಗಿಸಲ್ಪಟ್ಟಿವೆ.

## "ದೇವರ ರಾಜ್ಯ" ಎಂಬ ಪದ

ದೇವರ ರಾಜ್ಯವು ರಾಜ್ಯದಂತೆ ಬೈಬಲಿನ ಎರಡು ಒಡಂಬಡಿಕೆಗಳಲ್ಲಿ ಮುಂತಿಳಿಸಲ್ಪಟ್ಟಿದೆ ಮತ್ತು ಪ್ರಕಟಿಸಲ್ಪಟ್ಟಿದೆ. ಇದು ಹಳೇ ಒಡಂಬಡಿಕೆಯಲ್ಲಿ ಹಾಗೂ ಹೊಸ ಒಡಂಬಡಿಕೆಯ ಮೊದಲಿನ ಭಾಗದಲ್ಲಿ ಪ್ರವಾದನೆಯಾಗಿ ಹೇಳಲ್ಪಟ್ಟಿದೆ (ಮುಂತಿಳಿಸಲ್ಪಟ್ಟಿದೆ) ಮತ್ತು ಅಪೊಸ್ತಲರ ಕೃತ್ಯಗಳು 2ರಲ್ಲಿಯೂ ಹೊಸ ಒಡಂಬಡಿಕೆಯ ಉಳಿದ ಭಾಗಗಳಲ್ಲಿಯೂ ಭೂಲೋಕದಲ್ಲಿಯ ವಾಸ್ತವಿಕತೆಯಾಗಿ ತೋರಿಸಲ್ಪಟ್ಟಿದೆ. ಕೆಲವು ಸಲ ರಾಜ್ಯವು ರೂಪಕಗಳಲ್ಲಿಯೂ ಪ್ರವಾದನೆಯಲ್ಲಿ ಸಂಕೇತಗಳಾಗಿಯೂ ತೋರಿಸಲ್ಪಟ್ಟಿದ್ದರಿಂದ, ಅದರ ವಾಸ್ತವಿಕತೆಯು ಪ್ರವಾದಿಗಳಿಂದ ಕೊಡಲ್ಪಟ್ಟ ಅದರ ಚಿತ್ರಕ್ಕಿಂತ ದೊಡ್ಡದೂ ಹೆಚ್ಚು ಮಹಿಮೆಯುಳ್ಳದ್ದೂ ಆಗಿರುತ್ತದೆ. ಪ್ರವಾದಿಕ ವರ್ಣ ಚಿತ್ರವು ಸರಿಯಾದದ್ದಾಗಿದೆ.

ಆದರೆ ಅಲಂಕಾರಿಕ ಭಾಷೆಯು ಉಪಯೋಗಿಸಲ್ಪಟ್ಟ ಕಾರಣದಿಂದ ರಹಸ್ಯದ ಮುಸುಕನ್ನು ಹೊಂದಿತ್ತು.

"ರಾಜ್ಯ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಹಾಗೆಯೇ ಹಳೇ ಒಡಂಬಡಿಕೆಯಲ್ಲಿ ಮಹತ್ವವುಳ್ಳದ್ದಾಗಿದೆ. ಆದರೆ ಹೊಸ ಒಡಂಬಡಿಕೆಯಲ್ಲಿ ಅದರ ಉಪಯೋಗದ ಬಗ್ಗೆ ನಾವು ವಿಶೇಷವಾಗಿ ಆಸಕ್ತರಾಗಿದ್ದೇವೆ. ದೇವರ ರಾಜ್ಯವು ಹೊಸ ಒಡಂಬಡಿಕೆಯಲ್ಲಿ ಹಳೇ ಒಡಂಬಡಿಕೆಯ ಪ್ರವಾದನೆಗಳು ನೆರವೇರುವಿಕೆಯಂತೆ ತೋರಿಸಲ್ಪಟ್ಟಿದೆ. ಬೈಬಲಿನಲ್ಲಿ ಈ ಪದದ ಉಪಯೋಗವನ್ನು ಆಳವಾಗಿ ಅರ್ಥಮಾಡಿಕೊಳ್ಳದಿದ್ದರೆ ಕ್ರಿಸ್ತನ ಸಭೆಯನ್ನು ಒಬ್ಬನು ಅರ್ಥಮಾಡಿ ಕೊಳ್ಳದೇ ಹೋಗುವನು. (ಪುರವಣಿ 4ನ್ನು ನೋಡಿರಿ.)

ಕ್ರಿಸ್ತನು ಸ್ಥಾಪಿಸಿದ ಸಭೆಯೊಂದಿಗಿನ ಸಂಬಂಧದಲ್ಲಿ ಅದು ಉಪಯೋಗಿಸಿದ್ದನ್ನು ಸಂಬಂಧಿಸಿದ ಮೂರು ಕೋನಗಳಿಂದ ಈ ಪದವನ್ನು ಪರೀಕ್ಷಿಸೋಣ.

**ರಾಜಕೀಯ ಉಪಯೋಗ**

ಬೈಬಲಿನಲ್ಲಿ "ರಾಜ್ಯ" ಎಂಬ ಪದವು ಮೊದಲು ರಾಜಕೀಯ ಅರ್ಥದಲ್ಲಿ ಶ್ರೇಷ್ಠ ನಾಯಕನಾಗಿರುವವನ, ಸಾಮ್ರಾಟನ, ಬಲಶಾಲಿ ಅಧಿಕಾರಿಯ ಕ್ಷೇತ್ರಕ್ಕೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ.

"ರಾಜ್ಯ" ಎಂಬ ಪದದ ರಾಜಕೀಯ ಉಪಯೋಗವು ಇಸ್ರಾಯೇಲ ಜನಾಂಗದೊಂದಿಗೆ ಯೆಹೋವನ ಸಂಬಂಧದಿಂದಲೂ ಉದಾಹರಿಸಲ್ಪಟ್ಟಿದೆ. ಇಸ್ರಾಯೇಲ್ಯರ ಚರಿತ್ರೆಯಲ್ಲಿ ಮೊದಲು, ದೇವರು ಅವರ ಅರಸನಾಗಿದ್ದನು. ಅವರ ಧರ್ಮದ ಶಿರಸ್ಸೂ ಹಾಗೆಯೇ ಅವರ ಆಡಳಿತದ ಸರ್ವಶ್ರೇಷ್ಠ ನಾಯಕನೂ ಆಗಿದ್ದನು. ಈ ಸಮಯದಲ್ಲಿ ಇಸ್ರಾಯೇಲಿನ ಆಡಳಿತವು ದೇವರಾಧಿಪತ್ಯ, ಜನಾಂಗವು ದೇವರಾಳುವಿಕೆಯಲ್ಲಿತ್ತು. ಮೋಶೆ ಮತ್ತು ಇಸ್ರಾಯೇಲ್ಯರು, ಕೆಂಪು ಸಮುದ್ರದಲ್ಲಿ ಐಗುಪ್ತರನ್ನು ದೇವರು ನಾಶಪಡಿಸಿದ್ದನ್ನು ನೋಡಿದಾಗ, "ಯೆಹೋವನು ಯುಗ ಯುಗಾಂತರಗಳಲ್ಲಿಯೂ ಆಳುವಾತನು" (ವಿಮೋಚನಕಾಂಡ 15:18) ಎಂದು ಹಾಡಿದರು. ಇಸ್ರಾಯೇಲ್ಯರು ಸೀನಾಯಿ ಬೆಟ್ಟದ ಎದುರಿನಲ್ಲಿ ಬೀಡು ಬಿಟ್ಟಾಗ, "ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗ ಗಳಲ್ಲಿ ನನಗೆ ಸ್ವಕೀಯ ಜನರಾಗಿರುವಿರಿ. ಸಮಸ್ತ ಭೂಮಿಯು ನನ್ನದಷ್ಟೇ. ನೀವು ನನಗೆ ಯಾಜಕರ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ" (ವಿಮೋಚನಾ ಕಾಂಡ 19:5, 6ಎ) ಎಂದು ಕರ್ತನಿಂದ ಜನಾಂಗಕ್ಕೆ ಹೇಳಲ್ಪಟ್ಟಿತು. ಅವರು ಜೀವಿಸಬೇಕಾಗಿದ್ದ ನಿಯಮಗಳನ್ನು ಯೆಹೋವನು ಇಸ್ರಾಯೇಲ್ಯರಿಗೆ ಕೊಟ್ಟನು. ಎಲ್ಲಾ ನ್ಯಾಯವೂ, ಧಾರ್ಮಿಕ ಚಟುವಟಿಕೆಗಳೂ ಆತನ ಹೆಸರಿನಲ್ಲಿ

ನಡಿಸಲ್ಪಟ್ಟವು. ಇಸ್ರಾಯೇಲ್ಯರ ಯುದ್ಧಗಳಲ್ಲಿ ಆತನು ಅವರನ್ನು ನಡಿಸಿದನು ಮತ್ತು ಅವರ ಜಯಗಳಿಗೆ ಗೌರವಿಸಲ್ಪಟ್ಟನು (ಅರಣ್ಯಕಾಂಡ 21:34). ಆತನು ಇಸ್ರಾಯೇಲಿನ ಅರಸನಾಗಿದ್ದನು ಮತ್ತು ಇಸ್ರಾಯೇಲ್ ಆತನ ಆಳಿಕೆಯೊಳಗೆ ಒಂದು ಜನಾಂಗವಾಗಿತ್ತು, ಆತನ ರಾಜ್ಯವಾಗಿತ್ತು.

ಸಮುವೇಲನ ದಿನಗಳಲ್ಲಿ, ಇಸ್ರಾಯೇಲ್ ತನ್ನ ಸುತ್ತಲಿನ ಜನಾಂಗದವರಂತಾಗಲು ಅಪೇಕ್ಷಿಸಿ, ದೇವರು ತನಗೆ ಭೂಲೋಕದ ಅರಸನನ್ನು ಕೊಡಬೇಕೆಂದು ಕೇಳಿ ಕೊಂಡಿತು. ದೇವರು ಜನರ ಬೇಡಿಕೆಯನ್ನು ಅನುಗ್ರಹಿಸಿದನು, ಹಾಗೂ ಅವರ ಮೊದಲನೆಯ ಅರಸನಾಗಿ ಸೌಲನನ್ನು ಅವರಿಗೆ ಕೊಟ್ಟನು. ಪದದ ಅತೀ ಕಟ್ಟುನಿಟ್ಟಾದ ಅರ್ಥದಲ್ಲಿ ಇಸ್ರಾಯೇಲಿನ ಅರಸನು ಚಕ್ರಾಧಿಪತಿಯಾಗಿರಲಿಲ್ಲ. ಸಹಾಯಕ ಆಡಳಿತೆಗಾರನಂತೆ ಮತ್ತು ಸೇವಕನಂತೆ ಯೆಹೋವನಿಗೆ ಅವನು ಜವಾಬ್ದಾರನಾಗಿದ್ದನು. ಮೋಶೆಯ ಧರ್ಮಶಾಸ್ತ್ರದಿಂದ ಅವನ ಅಧಿಕಾರವು ಪರಿಮಿತಗೊಳ್ಳಬೇಕಾಗಿತ್ತು. ಅವನು ಯೆಹೋವನ ಸೇವಕನಾಗಿರಬೇಕಾಗಿತ್ತು, ಆತನ ಭೂಲೋಕದ ಪ್ರತಿನಿಧಿಯಾಗಿ ಸೇವೆ ಮಾಡಬೇಕಾಗಿತ್ತು, ಅವನು ವೈರಿಗಳಿಗೆ ವಿರುದ್ಧವಾಗಿ ಇಸ್ರಾಯೇಲನ್ನು ಕಾಪಾಡಬೇಕಾಗಿತ್ತು, ನೀತಿಯಲ್ಲಿ ಇಸ್ರಾಯೇಲನ್ನು ನಡಿಸಬೇಕಾಗಿತ್ತು, ಮತ್ತು ಐಕ್ಯತೆಯಲ್ಲಿ ಜನರನ್ನು ಒಂದು ಗೂಡಿಸಬೇಕಾಗಿತ್ತು.

ಆಗ ರಾಜಕೀಯ ಅರ್ಥದಲ್ಲಿ ರಾಜ್ಯವು ಸಾರ್ವಭೌಮನಾದ ಅರಸನನ್ನು, ಒಂದು ರೀತಿಯ ಆಡಳಿತವನ್ನು, ಆಳ್ವಿಕೆಯನ್ನು ಮತ್ತು ತನ್ನ ಆಡಳಿತವನ್ನು ನಡೆಸಲು ಅರಸನಿಂದ ನೇಮಕ ಮಾಡಲ್ಪಟ್ಟ ಕಾನೂನುಗಳನ್ನು ಒಳಗೊಂಡಿರ ಬೇಕಾಗಿತ್ತು. ರಾಜ್ಯಗಳು ದೊಡ್ಡವುಗಳಾಗಿರಬಹುದು ಇಲ್ಲವೇ ಸಣ್ಣವುಗಳಾಗಿರ ಬಹುದು; ಅವು ಭೂಮಿಯ ಆಡಳಿತವನ್ನು ಇಲ್ಲವೇ ಸಂಚಾರಿ ಜನಾಂಗವನ್ನು ಒಳಗೊಂಡಿರ ಬೇಕಾಗಿತ್ತು. "ರಾಜ್ಯ" ಎಂಬ ಪದದಲ್ಲಿಯ ಮುಖ್ಯ ವಿಚಾರವು ಅರಸನ ಆಳ್ವಿಕೆ ಮತ್ತು ಆ ಅರಸನಿಗೆ ಪ್ರಜೆಗಳ ವಿಧೇಯತೆಯಾಗಿದೆ.

**ಅದರ ಪ್ರವಾದಿಕ ಉಪಯೋಗ**

"ರಾಜ್ಯ" ಎಂಬ ಪದವು ಪರಿಶುದ್ಧ ಬರಹಗಳಲ್ಲಿ ಪ್ರವಾದಿಕ ಉಪ ಯೋಗ ಹೊಂದಿದೆ. ಈ ರಾಜಕೀಯ ಮಾತು ಜಗತ್ತಿನ ಅಂತಿಮ ಯುಗದಲ್ಲಿ, ಕ್ರೈಸ್ತಯುಗದಲ್ಲಿ ದೇವರು ಮಾಡಬೇಕೆಂದು ಉದ್ದೇಶಿಸಿದ ಕಾರ್ಯವನ್ನು ಮುಂತಿಳಿಸಲು ಪರಿಶುದ್ಧಾತ್ಮನಿಂದ ಉಪಯೋಗಿಸಲ್ಪಟ್ಟಿತು.

ಹಳೇ ಒಡಂಬಡಿಕೆಯ ಪ್ರಮುಖ "ರಾಜ್ಯ" ಪ್ರವಾದನೆಯು ದಾನಿಯೇಲ 2ರಲ್ಲಿ ಕಂಡು ಬರುತ್ತದೆ. "ಆ ರಾಜ್ಯ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು

ಬೇರೆ ಜನಾಂಗಕ್ಕೆ ಕದಲಿಹೋಗದು. ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿಯೇಲ 2:44) ಎಂದು ಬರೆಯಲು ದಾನಿಯೇಲನು ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟನು. ದಾನಿಯೇಲನ ಪ್ರಕಟನೆಯು ಪ್ರವಾದಿಸಲ್ಪಟ್ಟ ರಾಜ್ಯವನ್ನು ಕುರಿತು ಮಹತ್ವದ ಸತ್ಯಗಳನ್ನು ಬೋಧಿಸಿತು. ಮೊದಲನೆಯದಾಗಿ ಅದು ವಿಶೇಷವಾದ ರಾಜ್ಯವಾಗಿರುವುದು, ಇಲ್ಲವೇ ಪರಲೋಕದ ದೇವರಿಂದ ಸ್ಥಾಪಿಸಲ್ಪಟ್ಟ ರಾಜನ ಆಳ್ವಿಕೆಯಾಗಿರುವುದು. ಎರಡನೆಯದು, ಅದು ನಿತ್ಯವಾಗಿರುವ ಇಲ್ಲವೇ ಅಂತ್ಯವಿಲ್ಲದ ರಾಜ್ಯವಾಗಿರುವುದು. ಮೂರನೆಯದು, ಅದು ಬಲದಲ್ಲಿಯೂ ತಾಳಿಕೊಳ್ಳುವದರಲ್ಲಿಯೂ ಲೋಕದ ಎಲ್ಲಾ ಇತರ ರಾಜ್ಯಗಳಿಗಿಂತ ಮೇಲಾಗಿರುವುದು.

ಹೀಗಿದ್ದರೂ, ಈ ದೇವರ ರಾಜ್ಯದ ಬರುವಿಕೆಯನ್ನು ಕುರಿತ ಪ್ರವಾದನೆಗೆ ಸ್ನಾನಿಕನಾದ ಯೋಹಾನನ ಪ್ರಸಂಗದಲ್ಲಿ (ಮತ್ತಾಯ 3:1, 2) ಮತ್ತು ಯೇಸುವಿನ ಪ್ರಸಂಗ ಹಾಗೂ ಬೋಧನೆಯಲ್ಲಿ (ಮತ್ತಾಯ 4:17) ಮಹತ್ವದ ಕೇಂದ್ರ ಸ್ಥಾನವಿತ್ತು. ಸುವಾರ್ತೆಯು ಯೇಸುಕ್ರಿಸ್ತನಿಂದ ದೇವರ ರಾಜ್ಯದ ಸುವಾರ್ತೆಯಂತೆ ಹೇಳಲ್ಪಟ್ಟಿರುವುದು (ಮತ್ತಾಯ 9:35). ಹನ್ನೆರಡು ಜನ ಅಪೊಸ್ತಲರು ಮತ್ತು ಎಪ್ಪತ್ತು ಜನರು (ಲೂಕ 10:1-20) ದೇವರ ರಾಜ್ಯವು ಸಮೀಪಿಸಿದೆ ಎಂದು ಸಾರಲು ಯೇಸುವಿನಿಂದ ಕಳುಹಿಸಲ್ಪಟ್ಟರು (ಮತ್ತಾಯ 10:7; ಲೂಕ 10:9). ಯೇಸುವಿನ ಸಾಮ್ಯಗಳಲ್ಲಿ ಮೂರರಲ್ಲಿ ಒಂದಕ್ಕಿಂತ ಹೆಚ್ಚಿನವುಗಳು ರಾಜ್ಯದ ಬಗೆಗಿನ ಸತ್ಯಗಳನ್ನು ಬಹಿರಂಗ ಪಡಿಸುತ್ತವೆ. ರಾಜ್ಯವು ಬರುವದಕ್ಕಾಗಿ ಪ್ರಾರ್ಥಿಸಬೇಕೆಂದು ಯೇಸು ತನ್ನ ಶಿಷ್ಯರಿಗೆ ಬೋಧಿಸಿದನು (ಮತ್ತಾಯ 6:10).

ಯೋಹಾನನೂ, ಕ್ರಿಸ್ತನೂ ರಾಜ್ಯದ ಬಗ್ಗೆ ಎಷ್ಟು ಸಲ ಬೋಧಿಸಿದರು ಎಂಬುದರ ಮೇಲೆ ಅವಲಂಬಿಸಿ ಹಲವಾರು ಸಂಗತಿಗಳನ್ನು ಕಲಿತುಕೊಳ್ಳಬಹುದು. ಮೊದಲನೆಯದು, ರಾಜ್ಯದ ಬರುವಿಕೆಯು ದೇವರ ಯೋಜನೆಯಲ್ಲಿ ಬಹಳ ಮಹತ್ವದ್ದಾಗಿತ್ತು. ಎರಡನೆಯದು, ರಾಜ್ಯದ ಬರೋಣವು ಹತ್ತಿರವಾಗಿತ್ತು, "ಉದಯವಾಗಿತ್ತು" ಇಲ್ಲವೇ "ಸಮೀಪವಾಗಿತ್ತು." ಮೂರನೆಯದು, ಬರಲಿಕ್ಕಿದ್ದ ರಾಜ್ಯವು ದಾನಿಯೇಲನ ಪ್ರವಾದನೆಯ ಸ್ಪಷ್ಟವಾದ ನೆರವೇರುವಿಕೆಯಾಗಿತ್ತು. ನಾಲ್ಕನೆಯದು, ರಾಜ್ಯದ ಆಗಮನವು ದೇವರ ಕಾರ್ಯವಾಗಿತ್ತು, ಆದರೆ ಮನುಷ್ಯರ ಕಾರ್ಯವಾಗಿರಲಿಲ್ಲ. ಐದನೆಯದು, ಅದು ಬಂದಾಗ, ಪ್ರವೇಶಕ್ಕಾಗಿರುವ ದೇವರ ಶರತ್ತುಗಳನ್ನು ಪೂರೈಸುವ ಜನರು ಮಾತ್ರ ಅದರಲ್ಲಿ ಪ್ರವೇಶಿಸುವರು (ಯೋಹಾನ 3:5).

ಅಪೊಸ್ತಲರ ಕೃತ್ಯಗಳು 2ರಿಂದ ಮುಂದೆ ರಾಜ್ಯವು ಯಾವಾಗಲೂ ವಾಸ್ತವಿಕತೆಯಂತೆ, ಆಗಲೇ ಬಂದಿರುವಂತೆ ಹೇಳಲ್ಪಟ್ಟಿದೆ. "ನಾನು ನಿನಗೆ ನಿಜ

ನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು'' (ಯೋಹಾನ 3:5) ಎಂದು ಯೇಸುವು ನಿಕೊದೇಮನಿಗೆ ಹೇಳಿದನು. ಆದರೆ ಸಮಾರ್ಯದಲ್ಲಿ ಫಿಲಿಪ್ಪನು ಕ್ರಿಸ್ತನನ್ನು ಪ್ರಸಂಗಿಸಿದ್ದರ ಬಗ್ಗೆ, ಲೂಕನು ಹೀಗೆ ಬರೆದನು. ''ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ಬಾಪ್ತಿಸ್ಮ ಮಾಡಿಸಿಕೊಂಡರು'' (ಅಪೊಸ್ತಲರ ಕೃತ್ಯಗಳು 8:12). ರಾಜ್ಯವು ಬಂದಿರದಿದ್ದರೆ ಫಿಲಿಪ್ಪನು ಈ ಸಂದೇಶವನ್ನು ಪ್ರಸಂಗಿಸುತ್ತಿರಲಿಲ್ಲ.

''ರಾಜ್ಯ'' ಎಂಬ ಪದದ ಪ್ರವಾದಿಕ ಉಪಯೋಗವು ಜಗತ್ತಿಗಾಗಿ ಆತನ ಚಿತ್ತಕ್ಕೆ ಒಪ್ಪಿಸಿಕೊಟ್ಟವರ ಮೇಲೆ ದೇವರ ಆತ್ಮಿಕ ಆಳ್ವಿಕೆಯನ್ನು ಸಂಬಂಧಿಸಿರುತ್ತದೆ. ಅದು ಆಳ್ವಿಕೆಯನ್ನೂ ಆಡಳಿತಾ ಕ್ಷೇತ್ರವನ್ನೂ ಸಂಬಂಧಿಸಿದೆ - ಆಳ್ವಿಕೆಯು ಜೀವನದ ಮೇಲೆ ದೇವರ ಆತ್ಮಿಕ ಆಳ್ವಿಕೆಯಾಗಿದೆ, ಮತ್ತು ಆಡಳಿತೆಯ ಕ್ಷೇತ್ರವು ದೇವರ ಆಳ್ವಿಕೆಯು ಪ್ರತ್ಯಕ್ಷವಾಗಿರುವ ಆತ್ಮಿಕ ಸ್ಥಳವಾಗಿದೆ. ಕ್ರಿಸ್ತನ ರಾಜ್ಯಾಡಳಿತವು ''ಸಭೆ'' ಎಂಬ ಪದದಲ್ಲಿ ಒಳಗೊಂಡಿರುತ್ತದೆ. ಸುವಾರ್ತೆಯನ್ನು ಸ್ವೀಕರಿಸುವದರಿಂದ ಒಬ್ಬನು ಕ್ರಿಸ್ತನ ಚಿತ್ತಕ್ಕೆ ಸಮರ್ಪಿಸಿಕೊಳ್ಳುವಾಗ ಅವನು ಕ್ರಿಸ್ತನ ದೇಹದೊಳಗೆ, ಸಭೆಯೊಳಗೆ ತರಲ್ಪಡುತ್ತಾನೆ; ಮತ್ತು ಸಭೆಯ ಶಿರಸ್ಸಿಗೆ, ಕ್ರಿಸ್ತನಿಗೆ ಒಪ್ಪಿಸಿ ಕೊಟ್ಟ ಅವನು ಜೀವಿಸುವಾಗ ದೇವರ ಭೂಲೋಕದ ರಾಜ್ಯದಲ್ಲಿ ಹಾಗೂ ದೇವರ ಭೂಲೋಕದ ರಾಜ್ಯದಂತೆ ಜೀವಿಸುವನು. ಜನರ ಹೃದಯಗಳ ಮೇಲೆ ಕ್ರಿಸ್ತನ ರಾಜ್ಯಾಡಳಿತ ಸಭೆಯನ್ನು ಸೃಷ್ಟಿಸುತ್ತದೆ. ಹೀಗೆ ''ದೇವರ ರಾಜ್ಯ'' ಮತ್ತು ''ಕ್ರಿಸ್ತನ ಸಭೆ'' ಎಂಬ ಮಾತುಗಳಿಗೆ ಮತ್ತಾಯ 16:18, 19ರಲ್ಲಿ ಯೇಸು ಪ್ರಕಟಿಸಿದಂತೆ ಒಂದೇ ಅರ್ಥವಿರುವುದು.

**ಅದರ ಇಂದಿನ ದಿನದ ಉಪಯೋಗ**

''ರಾಜ್ಯ'' ಎಂಬ ಪದದ ರಾಜಕೀಯ ಹಿನ್ನೆಲೆ, ಪ್ರವಾದಿಕ ಉಪಯೋಗ, ಹಾಗೂ ಹೊಸ ಒಡಂಬಡಿಕೆಯ ವಾಸ್ತವಿಕತೆಯು ಪದದ ಇಂದಿನ ದಿನದ, ವ್ಯಾವ ಹಾರಿಕ ಉಪಯೋಗದ ಅವಶ್ಯಕತೆಯುಳ್ಳದ್ದಾಗಿದೆ.

ಮೊದಲನೆಯದು, *ಪ್ರವಾದಿಕ ನೆರವೇರುವಿಕೆಯ* ಅರ್ಥದಲ್ಲಿ ಅದು ಉಪಯೋಗಿಸಲ್ಪಡಬೇಕು, ದಾನಿಯೇಲನು ಮಾತಾಡಿದಂಥ ರಾಜ್ಯವು ಬಂದಿರುತ್ತದೆ. ರಾಜ್ಯವು, ಆತ್ಮಿಕ ಕ್ಷೇತ್ರವನ್ನು ಒಳಗೊಂಡಿರುವ ಆಳ್ವಿಕೆಯ ರೂಪದಲ್ಲಿ ದೇವರ ವಿಶೇಷ ಕಾರ್ಯವು ಈಗ ಪ್ರತ್ಯಕ್ಷವಾಗಿದೆ; ದೇವರ ಚಿತ್ತಕ್ಕೆ ತಮ್ಮ ತಲೆಬಾಗಿದವರು ದೇವರ ರಾಜ್ಯಾಡಳಿತದೊಳಗೆ ಬಂದರು. ಬರಲಿಕ್ಕಿದ್ದ ದೇವರ ರಾಜ್ಯದ ಬಗೆಗಿನ ಪ್ರವಾದನೆಗಳು ನೆರವೇರಿಸಲ್ಪಟ್ಟಿರುವವು.

ಎರಡನೆಯದು, "ರಾಜ್ಯ" ಎಂಬ ಪದವನ್ನು *ಇಂದಿನ ದಿನದ ವಾಸ್ತವಿಕತೆಯ* ಅರ್ಥದಲ್ಲಿ ಉಪಯೋಗಿಸಬೇಕು. ದೇವರ ರಾಜ್ಯವು ಇನ್ನು ಮುಂದೆ ಯಾವುದೇ ಒಂದು ದಿನ ಬರಲಿಕ್ಕಿದುದ್ದು ಆಗಿರುವದಿಲ್ಲ. ವಿಧೇಯ, ವಿಶ್ವಾಸ ಮುಖಾಂತರವಾಗಿ ಆತನ ಸಭೆಯೊಳಗೆ ಬಂದವರ ಮೇಲೆ ಕ್ರಿಸ್ತನು ಈಗ ಆಳಿಕೆ ಮಾಡುವನು. ಒಂದು ಅರ್ಥದಲ್ಲಿ ನಮ್ಮ ಪ್ರಾರ್ಥನೆಯು "ರಾಜ್ಯವು ಬರಲಿ" ಎಂಬುದಾಗಿರಬಾರದು. ಆದರೆ, "ನನ್ನ ಜೀವಿತದ ಮೇಲೆ ನೀನು ಆಳಿಕೆ ಮಾಡುವಂತೆ ಮತ್ತು ನಾನು ನಿನ್ನ ರಾಜ್ಯದಲ್ಲಿ ಜೀವಿಸಲಿಕ್ಕಾಗುವಂತೆ ನಿನ್ನ ಚಿತ್ತಕ್ಕೆ ಸಂಪೂರ್ಣವಾಗಿ ಒಪ್ಪಿಸುವೆನು" ಎಂದಿರಬೇಕು.

ಮೂರನೆಯದು, ದೇವರ ಪರಲೋಕದ ಆಳ್ವಿಕೆಯು, ಭೂಲೋಕದ *ಒಂದು ಭಾಗಕ್ಕೆ ಸಂಬಂಧದಲ್ಲಿ ಈ ಪದವು ಉಪಯೋಗಿಸಲ್ಪಡಬೇಕು.* ವಿಶೇಷವಾಗಿ ಆಯ್ದುಕೊಂಡ ದೇವರ ಜನಾಂಗವು, ಸಭೆಯು, ಆತನ ರಾಜ್ಯದ ಭೂಲೋಕದ ಭಾಗವಾಗಿದೆ. ಯೇಸು ಮತ್ತು ಹೊಸ ಒಡಂಬಡಿಕೆಯ ಬರಹಗಾರರು - ಸಭೆಯು ಬಂದಿರುವ ದೇವರ ರಾಜ್ಯವಾಗಿದೆ ಇಲ್ಲವೇ ಕ್ರಿಸ್ತನ ರಾಜ್ಯವಾಗಿದೆ ಎಂದು ತೋರಿಸಿದ್ದಾರೆ. ಅರಸನಿಗೆ ಸಮರ್ಪಿಸುವುದು ನಾಗರಿಕತ್ವವನ್ನೂ ರಾಜ್ಯವನ್ನೂ ಸೃಷ್ಟಿಸುತ್ತದೆ. ವಿಧೇಯ ವಿಶ್ವಾಸಿಗಳ ಈ ಸಮಾಜವನ್ನು ಯೇಸುವು ತನ್ನ ಸಭೆ ಎಂದು ಕರೆದನು (ಮತ್ತಾಯ 16:18, 19).

ನಾಲ್ಕನೆಯದು, ಈ ಪದವನ್ನು ನಾವು *ಆತ್ಮಿಕ ಆಡಳಿತದ* ಸಬಂಧದಲ್ಲಿ ನೋಡಬೇಕು. ನಂಬಿಗಸ್ತ ಕ್ರೈಸ್ತರು ಇಂದು ಕ್ರಿಸ್ತನ ಆತ್ಮಿಕ ಆಡಳಿತೆಯಲ್ಲಿ ಇದ್ದಾರೆ. ಬರಲಿದ್ದ ನಿತ್ಯತ್ವದಲ್ಲಿ ದೇವರೊಂದಿಗೆ, ಕ್ರಿಸ್ತನೊಂದಿಗೆ, ಮತ್ತು ಪರಿಶುದ್ಧಾತ್ಮನೊಂದಿಗೆ ನಿಕಟವಾದ ಹಾಗೂ ಸಂಪೂರ್ಣವಾದ ಸಂಬಂಧದಲ್ಲಿ ಪ್ರವೇಶಿಸುವ ನಿರೀಕ್ಷೆಯಲ್ಲಿದ್ದಾರೆ. ಈಗ ಸಭೆಯು ರಾಜ್ಯವಾಗಿರುವುದು: ಅದರ ಸದಸ್ಯರು ಬರಲಿದ್ದ ನಿತ್ಯ ರಾಜ್ಯಕ್ಕೆ ಮುನ್ನೋಡುತ್ತಿದ್ದಾರೆ. "ರಾಜ್ಯ" ಎಂಬ ಪದಕ್ಕೆ ಅದರ ಭವಿಷ್ಯದ ಅರ್ಥವಿದೆ. "ನನ್ನನ್ನು ಸ್ವಾಮೀ, ಸ್ವಾಮೀ, ಅನ್ನುವವರೆಲ್ಲರು ಪರಲೋಕದ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ ..." (ಮತ್ತಾಯ 7:21) ಎಂದು ಕ್ರಿಸ್ತನು ಹೇಳಿದನು. "ನಾನು ಯಾವ ದುಷ್ಟತ್ವವನ್ನೂ ಮಾಡದಂತೆ ಕರ್ತನು ನನ್ನನ್ನು ಕಾಪಾಡಿ ತನ್ನ ಬಳಿಗೆ ಪರಲೋಕ ರಾಜ್ಯಕ್ಕೆ ಸೇರಿಸುವನು. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ. ಆಮೆನ್" (2 ತಿಮೊಥೆ 4:18) ಎಂದು ಪೌಲನು ಬರೆದಿದ್ದಾನೆ. ಪೌಲನು ದೇವರ ರಾಜ್ಯದಲ್ಲಿದ್ದನು, ಆದರೆ ಪರಲೋಕ ರಾಜ್ಯದಲ್ಲಿ ಪ್ರವೇಶಿಸುವದನ್ನು ಎದುರು ನೋಡಿದನು. ರಾಜ್ಯವನ್ನು ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿಯ ಪ್ರವಾದನೆಗಳ ನೆರವೇರುವಿಕೆಯನ್ನು ನೋಡಿದನು. ಇವೆರಡೂ ಕ್ರಿಸ್ತನು ಕಟ್ಟಿದ ಸಭೆಯಲ್ಲಿ ಮತ್ತು ನಿತ್ಯತ್ವಕ್ಕಾಗಿರುವ ವಾಗ್ದಾನದಲ್ಲಿ ಇಂದಿನ ದಿನದ ವಾಸ್ತವಿಕತೆಯಂತೆ ತೋರಿಸಲ್ಪಟ್ಟಿವೆ.

ಹೊಸ ಒಡಂಬಡಿಕೆಯ ಮುಖಾಂತರ ಒಬ್ಬನು ಚಲಿಸುವಾಗ, ಅವನು "ಪರಲೋಕ ರಾಜ್ಯ," "ದೇವರ ರಾಜ್ಯ" ಎಂದಾಗಿರಲೀ ಇಲ್ಲವೇ ರಾಜ್ಯಕ್ಕೆ ಸಂಬಂಧಿಸಿದ ಬೇರೆ ಯಾವುದೇ ಮಾತಾಗಲೀ "ರಾಜ್ಯ" ಎಂಬ ಪದದ ಉಪಯೋಗವು ಕಡೆಮೆಯಾಗುತ್ತಿರುವದನ್ನು ಗಮನಿಸುತ್ತಾನೆ. ರಾಜ್ಯ ಎಂಬುದಕ್ಕೆ ಮತ್ತಾಯನಲ್ಲಿ ನಲ್ವತ್ತೊಂಭತ್ತು ಸಲ, ಮಾರ್ಕನಲ್ಲಿ ಹದಿನೈದು ಸಲ, ಲೂಕನಲ್ಲಿ ಮೂವತ್ತೊಂಭತ್ತು ಸಲ, ಯೋಹಾನನಲ್ಲಿ ಐದು ಸಲ, ಅಪೊಸ್ತಲರ ಕೃತ್ಯಗಳಲ್ಲಿ ಎಂಟುಸಲ, ಪೌಲ ಪತ್ರಿಕೆಗಳಲ್ಲಿ ಹದಿನಾಲ್ಕು ಸಲ, ಸಾಮಾನ್ಯ ಪತ್ರಿಕೆ ಗಳಲ್ಲಿ ಎರಡು ಸಲ, ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಎರಡು ಸಲ, ಪ್ರಕಟನೆ ಗ್ರಂಥದಲ್ಲಿ ಮೂರು ಸಲ ಉಲ್ಲೇಖಗಳಿವೆ. ಹೀಗಿರುವದರಿಂದ "ರಾಜ್ಯ" ಎಂಬ ಪದವು ಮುಂದುವರಿಸಲ್ಪಟ್ಟಿದೆ ಆದರೆ ಹೊಸ ಒಡಂಬಡಿಕೆಯಲ್ಲಿ ಉಪಯೋಗವು ಕಡಿಮೆಯಾಗುತ್ತ ಹೋಗಿದೆ (ಪುರವಣಿ 4ನ್ನು ನೋಡಿರಿ).

"ಪರಲೋಕ ರಾಜ್ಯ" ಎಂಬ ಪದವನ್ನು ಉಪಯೋಗಿಸಿದ ಹೊಸ ಒಡಂಬಡಿಕೆಯ ಬರಹಗಾರನು ಮತ್ತಾಯನು ಮಾತ್ರವೇ. ಮಾರ್ಕ, ಲೂಕ, ಯೋಹಾನರು "ದೇವರ ರಾಜ್ಯ" ಎಂಬುದನ್ನು ಮಾತ್ರ ಉಪಯೋಗಿಸಿದ್ದಾರೆ. "ರಾಜ್ಯ" ಎಂಬ ಪದದ ಉಪಯೋಗವು ಕಡಿಮೆಯಾಗುತ್ತಾ ಬರುವಾಗ, ಒಬ್ಬನು ಅಪೊಸ್ತಲರ ಕೃತ್ಯಗಳಿಗೆ ಬರುವಾಗ "ಸಭೆ" ಎಂಬ ಪದದ ಉಪಯೋಗವು ಹೆಚ್ಚಾಗುತ್ತ ಹೋಗುವದನ್ನು ಕಂಡುಕೊಳ್ಳುವನು. "ರಾಜ್ಯ" ಎಂಬ ಪದಕ್ಕೆ ಬದಲಾಗಿ "ಸಭೆ" ಎಂಬ ಪದವನ್ನು ಪರಿಶುದ್ಧಾತ್ಮನು ಇಟ್ಟನೆಂಬಂತೆ ತೋರುತ್ತದೆ.

## "ಸಭೆ" ಎಂಬ ಪದ

"ಸಭೆ" ಎಂಬ ಪದಕ್ಕೆ ಅದು ಇಡೀ ಹೊಸ ಒಡಂಬಡಿಕೆಯ ಸಂದೇಶಕ್ಕೆ ಪ್ರಮುಖವಾಗಿ ಸಂಬಂಧಿಸಿದ್ದರಿಂದ ವಿಶೇಷ ಮಹತ್ವ ಬಂದಿದೆ. "ಸಭೆ"ಯು ಒಂದು ಪದದ ಇಂಗ್ಲೀಷ್ ಭಾಷಾಂತರವಾಗಿದ್ದು ಗ್ರೀಕ ಹೊಸ ಒಡಂಬಡಿಕೆಯಲ್ಲಿ 114 ಸಲ ಕಂಡು ಬರುತ್ತದೆ. ಹೊಸ ಒಡಂಬಡಿಕೆಯಲ್ಲಿ ಈ ಪದದ ಉಪಯೋ ಗವನ್ನು ಅರ್ಥಮಾಡಿಕೊಳ್ಳದೇ ಒಬ್ಬನು ರಕ್ಷಣೆಯ ಕ್ರಿಸ್ತನ ಮಾರ್ಗವನ್ನು ಅರ್ಥ ಮಾಡಿಕೊಳ್ಳುವದನ್ನು ನಿರೀಕ್ಷಿಸಲಾಗದು ಎಂದು ಹೇಳುವುದು ಬಹುಶಃ ಸರಿಯಾದದ್ದಾಗಿದೆ.

### ಅದರ ಲೌಕಿಕ ಉಪಯೋಗ

ಈ ಪದವು ಮೊದಲನೆಯದಾಗಿ ಸಾಮಾನ್ಯವಾದ ಪದವಾಗಿದ್ದು ಯಾವುದೇ ಒಂದು ಧಾರ್ಮಿಕ ಅರ್ಥವಿಲ್ಲದ ಅನುದಿನದ ಮಾತಾಗಿದೆ.

ಅಪೊಸ್ತಲರ ಕೃತ್ಯಗಳು 19ರಲ್ಲಿ ಎಫೆಸದಲ್ಲಿ ನಡೆದ ದಂಗೆಯೊಂದಿಗೆ ಸಂಬಂಧಿಸಿದ್ದರಲ್ಲಿ ಈ ಪದದ ಉಪಯೋಗವು ಒಂದು ಮಾದರಿಯಾಗಿದೆ. ಕ್ರೈಸ್ತತ್ವವನ್ನು ಕುರಿತ ಗಲಿಬಿಲಿಯು ಬೆಳೆಯಿತು. ಜನರು ಸಮೀಪದ ನಾಟಕ ಶಾಲೆಯೊಳಗೆ ನುಗ್ಗಿದರು. ಗಲಿಬಿಲಿಯು ಹೆಚ್ಚಾಯಿತು. ಅವರು ಕೂಡಿಬಂದದ್ದನ್ನು ಲೇಖಕನಾದ ಲೂಕನು ಹೀಗೆ ಹೇಳಿದ್ದಾನೆ, "*ಸಭೆಯು* ಗಲಿಬಿಲಿಯಾಯಿತು, ಮತ್ತು ಹೆಚ್ಚಾದ ಜನರಿಗೆ, ತಾವು *ಕೂಡಿ ಬಂದಿದ್ದ* ಕಾರಣವು ಗೊತ್ತಿರಲಿಲ್ಲ. ಕೆಲವರು ಒಂದು ಬಗೆಯಾಗಿ ಮತ್ತೆ ಕೆಲವರು ಇನ್ನೊಂದು ಬಗೆಯಾಗಿ ಕೂಗುತ್ತಿದ್ದರು" (ಅಪೊಸ್ತಲರ ಕೃತ್ಯಗಳು 19:32; ಒತ್ತಿ ಹೇಳಿದ್ದು ನನ್ನದು).

ಈ ವಚನದಲ್ಲಿ ಸಭೆಗಾಗಿ ಲೂಕನು ಉಪಯೋಗಿಸಿದ ಪದ *ಎಕ್ಲೇಸಿಯ*. ಈ ಪದವು ಇಂಗ್ಲೀಷ್‌ನಲ್ಲಿ ನಮ್ಮ ಪದ "church," ಸಭೆ ಎಂದು ಭಾಷಾಂತರಿಸಲ್ಪಟ್ಟಿದೆ. ಅಂತಿಮವಾಗಿ ಪಟ್ಟಣದ ಯಜಮಾನನು ಹೀಗೆ ಹೇಳಿದನು.

> ಏನಾದರೂ ಹೆಚ್ಚು ವಿಚಾರಣೆ ಬೇಕಾದರೆ ಅದು ನ್ಯಾಯವಾಗಿ *ನೆರೆದ ಸಭೆಯಲ್ಲಿ* ತೀರ್ಮಾನಿಸಲ್ಪಡಬೇಕು. ಈ ದಿನದಲ್ಲಿ ನ್ಯಾಯವಾದ ಕಾರಣವಿಲ್ಲದೆ ನೆರೆದ ಕೂಟದ ವಿಷಯದಲ್ಲಿ ಇದು ಒಂದು ದಂಗೆ ಎಂಬುದಾಗಿ ನಮ್ಮ ಮೇಲೆ ತಪ್ಪು ಹೊರಿಸುವದಕ್ಕೆ ಆಸ್ಪದವಾಯಿತು. ಈ ದೊಂಬಿಯನ್ನು ಕುರಿತು ವಿಚಾರಣೆ ನಡೆದರೆ ನಮ್ಮಿಂದ ಉತ್ತರ ಕೊಡುವದಕ್ಕೆ ಆಗುವದೇ ಇಲ್ಲ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 19:39, 40; ಒತ್ತಿ ಹೇಳಿದ್ದು ನನ್ನದು).

"ಈ ಮಾತುಗಳನ್ನು ಹೇಳಿ *ಸಭೆಯನ್ನು* ಮುಗಿಸಿದನು" ಎಂದು ಲೂಕನು ಕೂಡಿಸಿದ್ದಾನೆ.

ಪಟ್ಟಣದ ಸಭೆಯ ಈ ವರದಿಯಲ್ಲಿ ಲೂಕನು ಮೂರುಸಲ "ಎಕ್ಲೇಸಿಯಾ" ಎಂಬ ಗ್ರೀಕ ಪದವನ್ನು ಉಪಯೋಗಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 19:32, 39, 41). ಕೂಡಿಬಂದ ಗುಂಪಿನ ಅರ್ಥದಲ್ಲಿ ಮಾತ್ರವೇ ಅವನು ಇದನ್ನು ಉಪಯೋಗಿಸಿರುವನು. ಯಾಕಂದರೆ ವಚನ 32 ಮತ್ತು 41ರಲ್ಲಿ ಕೂಡಿ ಬಂದ ಜನಸಮೂಹವು ಎಕ್ಲೇಸಿಯ ಎಂದು ಕರೆಯಲ್ಪಟ್ಟಿದ್ದು ವಚನ 30ರಲ್ಲಿ ಗಲಭೆಯ ಗುಂಪು ಎಂದು ಹೇಳಲ್ಪಟ್ಟಿದೆ. ನಾಟಕ ಶಾಲೆಯೊಳಗೆ ಬಂದ ಜನರಗುಂಪು *(ಎಕ್ಲೇಸಿಯಾ)* ಒಂದಾಗಿ ಕರೆಯಲ್ಪಟ್ಟಿರಲಿಲ್ಲ: ಎಲ್ಲಾ ಗಲಿಬಿಲಿಯಲ್ಲಿಯೂ ಘಟನೆಗಳ ಭರತದಲ್ಲಿ ಸಂಭವಿಸಿತು. ಅದು ನಿರ್ಣಯಿಸಲ್ಪಡುವ ಕಾನೂನು ಬದ್ಧ ಸಭೆಯನ್ನು ಎಕ್ಲೇಸಿಯಾ 39ನೆಯ ವಚನದಲ್ಲಿ ಎಂದು ಕರೆದಿದ್ದಾನೆ.

ಎಕ್ಲೇಸಿಯಾದ ಲೂಕನ ಉಪಯೋಗದ ಬೆಳಕಿನಲ್ಲಿ, ಅದರ ಲೌಕಿಕ ಉಪಯೋಗದಲ್ಲಿ, ಯಾವುದೇ ರೀತಿಯ ಸಭೆಗೆ ಸಂಬಂಧಿಸುವದನ್ನು ಯೋಚಿ

ಸುವುದು ಉತ್ತಮವಾದದ್ದಾಗಿದೆ. ಕೆಲವು ಸಲ ಸಭೆಯು ಕೂಡಿಸಲ್ಪಟ್ಟಿರುತ್ತದೆ, ಇಲ್ಲವೇ ಒಂದಾಗಿ ಬರಲು ಆಜ್ಞಾಪಿಸಲ್ಪಡುತ್ತದೆ. ಕೆಲವು ಸಲ ಸಭೆಯು ತನ್ನಷ್ಟಕ್ಕೆ ತಾನೇ ಕೂಡಿಬರುತ್ತದೆ. ಸಭೆಯ ಆ ಪ್ರತಿಯೊಂದು ವಿಧಾನವನ್ನು *ಎಕ್ಲೇಸಿಯಾ* ಎಂದು ಲೂಕನು ಕರೆದಿದ್ದಾನೆ.

ಇಂದು ಕೆಲವು ಭಾಷಾಪಂಡಿತರು ಹೊಸ ಒಡಂಬಡಿಕೆಯ ದಿನಗಳಲ್ಲಿ *ಎಕ್ಲೇ ಸಿಯದ* ಲೌಕಿಕ ಉಪಯೋಗಕ್ಕೆ "ಹೊರಗೆ ಕರೆಯಲ್ಪಟ್ಟ ಸಭೆ" ಎಂಬುದಕ್ಕಿಂತ "ಕೇವಲ ಒಂದು ಕೂಟ" ಎಂಬುದಕ್ಕೆ ಹೆಚ್ಚು ಅರ್ಥವಿತ್ತೆಂದು ನಂಬುತ್ತಾರೆ. ಅಪೊಸ್ತಲರ ಕೃತ್ಯಗಳು 19ರಲ್ಲಿ ಲೂಕನಿಂದ ಈ ಪದದ ಉಪಯೋಗವು ಅವರ ತೀರ್ಮಾನ ಗಳನ್ನು ದೃಢಪಡಿಸುವಂತೆ ತೋರುತ್ತದೆ.

ಎಕ್ಲೇಸಿಯಾ ಪದದ ಲೂಕನ ಉಪಯೋಗವು ನಮ್ಮ ಕರ್ತನು ಧಾರ್ಮಿಕ ಅರ್ಥದಲ್ಲಿ ಉಪಯೋಗಿಸುವ ಮೊದಲು ಲೌಕಿಕ ಜಗತ್ತಿನಲ್ಲಿ ಈ ಪದ ಹೇಗೆ ಉಪಯೋಗಿಸಲ್ಪಟ್ಟದ್ದರ ಒಳನೋಟವನ್ನು ಕೊಡುತ್ತದೆ. ಪದದ ಈ ಹಿನ್ನೆಲೆಯು, ಎಕ್ಲೇಸಿಯ ಪದವನ್ನು ನಮ್ಮ ಕರ್ತನು ಉಪಯೋಗಿಸುವದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡುವುದು.

**ಅದರ ಧಾರ್ಮಿಕ ಉಪಯೋಗ**

*ಎಕ್ಲೇಸಿಯ* ಪದಕ್ಕೆ ಹೊಸ ಒಡಂಬಡಿಕೆಯಲ್ಲಿ ಧಾರ್ಮಿಕ ಉಪಯೋಗವು ಸಹ ಇರುತ್ತದೆ.

ಕ್ರೈಸ್ತತ್ವಕ್ಕೆ ಯೆಹೂದೀ ಹಿನ್ನೆಲೆಯಲ್ಲಿ ದೇವರ ಜನಾಂಗದ ಸಭೆಯ ತತ್ವವಿತ್ತೆಂದು ಹಳೇ ಒಡಂಬಡಿಕೆಯಿಂದ ಸ್ಪಷ್ಟವಾಗುತ್ತದೆ. *ಸೆಪ್ಟುಜೆಂಟ್‌ದಲ್ಲಿ* ಅಂದರೆ ಹಳೇ ಒಡಂಬಡಿಕೆಯ ಪರಿಶುದ್ಧ ಗ್ರಂಥದ ಗ್ರೀಕ ಭಾಷಂತರದಲ್ಲಿ, ಇಸ್ರಾಯೇಲಿನ "ಸಭೆಯು" ಹಿಬ್ರೂವಿನಲ್ಲಿ *qahal* (ಖಹಾಲ) ಎಂದು ಇದ್ದು, ಗ್ರೀಕಿನಲ್ಲಿ *ಎಕ್ಲೇಸಿಯಾ* ಎಂಬ ಪದದಿಂದ ಭಾಷಾಂತರಿಸಲ್ಪಟ್ಟಿದೆ. ಧಾರ್ಮಿಕ ಉದ್ದೇಶಗಳಿಗಾಗಿ ಕರ್ತನ ಮುಂದೆ ಕೂಡಿದ ಇಸ್ರಾಯೇಲ್ಯರನ್ನೊಳ ಗೊಂಡ "ಸಭೆ" ಯಾಗಿದ್ದಕ್ಕೆ ಇದು ವಿಶೇಷವಾಗಿ ಉಪಯೋಗಿಸಲ್ಪಟ್ಟಿದೆ (ಧರ್ಮೋಪದೇಶಕಾಂಡ 18:16; 31:30; 1 ಅರಸುಗಳು 8:65; ಅಪೊಸ್ತಲರ ಕೃತ್ಯಗಳು 7:38).

"ಸಿನಾಗೋಗ" (ಸಭಾಮಂದಿರ) ಎಂಬ ಪದವು ಮೂಲದಲ್ಲಿ ಉಪಯೋಗಿ ಸಲ್ಪಟ್ಟಿದ್ದು ಪ್ರತ್ಯೇಕವಾದ ಉದ್ದೇಶಕ್ಕಾಗಿ ಒಟ್ಟಾಗಿ ಕೂಡಿಬಂದಿದ್ದ ಜನರ ಸಭೆಗೆ ಸಂಬಂಧಿಸಿದೆ. ಅನಂತರದಲ್ಲಿ ಆರಾಧನೆಗಾಗಿ ಕೂಡಿಬಂದ ಕ್ರೈಸ್ತರ ಅಸೆಂಬ್ಲಿಗೆ ಈ ಪದ ಅನ್ವಯಿಸಲ್ಪಟ್ಟಿತು. ಯಾಕೋಬನು ಸಿನಾಗೋಗ ಮತ್ತು *ಎಕ್ಲೇಸಿಯ* ಎಂಬ ಎರಡೂ ಗ್ರೀಕ ಪದಗಳನ್ನು ಉಪಯೋಗಿಸಿದ್ದಾನೆ. ಯಾಕಂದರೆ ತನ್ನ

ಪುಸ್ತಕವನ್ನು ಓದುವವರು ಯೆಹೂದಿ ಕ್ರೈಸ್ತರೆಂಬುದು ಅವನ ಮನಸ್ಸಿನಲ್ಲಿತ್ತು. ಆರಾಧನೆಗಾಗಿ ಕೂಡಿಬಂದ ಕ್ರೈಸ್ತರ ಸಭೆಗಾಗಿ ಅವನು ಸಿನಾಗೋಗ ಉಪಯೋಗಿಸಿದನು (ಯಾಕೋಬ 2:2) ಹಾಗೂ ಕೂಡಲ್ಪಟ್ಟ ಸ್ಥಳದಲ್ಲಿರುವ ವಿಶ್ವಾಸಗಳ ಗುಂಪಿಗೆ ಎಕ್ಲೇಸಿಯ ಎಂಬುದನ್ನು ಉಪಯೋಗಿಸಿದನು (ಯಾಕೋಬ 5:14).

ಹೀಗೆ ತನ್ನ ರಕ್ಷಣೆಯ ಮುಖಾಂತರವಾಗಿ ದೇವರ ಅದ್ವಿತೀಯ ಜನಾಂಗವಾಗಿ ನಾಮಾಂಕಿತವಾಗಿರುವ ಪದವನ್ನು ನಮ್ಮ ಕರ್ತನು ಆಯ್ಕೆಮಾಡಿದನು (ಮತ್ತಾಯ 16:18). ಬಹುಶಃ ಅದರ ಲೌಕಿಕ ಅರ್ಥದಲ್ಲಿ "ಅಸೆಂಬ್ಲಿ" ಎಂದಾಗುತ್ತದೆ. ಆದರೆ ಅದರ ಹಳೆ ಒಡಂಬಡಿಕೆಯ ಉಪಯೋಗದಲ್ಲಿ ಅದು "ದೇವರ ಜನರ ಸಭೆ" ಆಗಿತ್ತು. ನಮ್ಮ ಕರ್ತನು ಲೌಕಿಕ ಪದವನ್ನು ತೆಗೆದುಕೊಂಡು ಅದಕ್ಕೆ ಒಂದು ವಿಶೇಷ ಧಾರ್ಮಿಕ ಅರ್ಥಕೊಟ್ಟನು. ಈ ಪದದ ಆತನ ಆಯ್ಕೆಯಲ್ಲಿ, ಅದರ ಲೌಕಿಕ ಮತ್ತು ಧಾರ್ಮಿಕ ಹಿನ್ನೆಲೆಗಳನ್ನು ತೆಗೆದುಕೊಂಡು ತನ್ನ ಹೊಸ ಅರ್ಥಗಳನ್ನು ಕೂಡಿಸಿದನು. ಯೇಸುವಿನ ಉಪಯೋಗದಲ್ಲಿ ಆತನು ಅದಕ್ಕೆ ಕೊಟ್ಟ ಪದವು ಅವರು ಒಂದಾಗಿ ಕೂಡಿಬರಲಿ ಇಲ್ಲವೇ ಬಾರದೇ ಇರಲಿ ಕ್ರಿಸ್ತನ ರಕ್ತದಿಂದ ವಿಮೋಚಿತರಾದ ಸಾರ್ವತ್ರಿಕ ಜನಾಂಗಕ್ಕೆ ಸಂಬಂಧಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 8:3; ಎಫೆಸ 1:22).

*ಎಕ್ಲೇಸಿಯಾ* ಪದಕ್ಕೆ ಸಂಬಂಧಿಸಿದ, ಹೊಸ ಒಡಂಡಿಕೆಯಲ್ಲಿ ಕೊಡಲ್ಪಟ್ಟ ಇನ್ನೊಂದು ಯೋಚನೆಯು "ಹೊರಗೆ ಕರೆಯಲ್ಪಟ್ಟವರು" ಇಲ್ಲವೇ "ಪ್ರತ್ಯೇಕಿಸಲ್ಪಟ್ಟವರು" ಆಗಿರುವ ವರ್ಣ ಚಿತ್ರವು. ಈ ಯೋಚನೆಯು, ಬಹುಶಃ ಪದದ ಸಾಮಾನ್ಯ ಉಪಯೋಗದಲ್ಲಿ ಇಲ್ಲದ್ದಾಗಿದ್ದರೂ ಕ್ರಿಸ್ತನ ವಿಶೇಷ ಉಪಯೋಗದಲ್ಲಿ ಅರ್ಥದ ಪ್ರಮುಖ ಭಾಗವಾಗಿತ್ತು. ಈ ಭಾವನೆ ನಾಮಾಂಕಿತಗೊಂಡ ಜನರ ಸ್ವಭಾವದಿಂದ ಪದದೊಳಗೆ ಪ್ರಕಟಿಸಲ್ಪಟ್ಟಿತ್ತು.

ಪಂಚಾಶತ್ತಮದ ದಿನದಂದು ಜನಸಮೂಹಕ್ಕೆ ಪೇತ್ರನು ಹೀಗೆ ಹೇಳಿದನು, "ಆ ವಾಗ್ದಾನವು ನಿಮಗೂ, ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" (ಅಪೊಸ್ತಲರ ಕೃತ್ಯಗಳು 2:39). "ತನ್ನ ರಾಜ್ಯ ಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನಡೆಯಬೇಕು" (1 ಥೆಸಲೊನೀಕ 2:12) ಎಂದು ಪೌಲನು ಥೆಸಲೊನೀಕದವರಿಗೆ ಹೇಳಿದನು. ಸುವಾರ್ತೆಯ ಮೂಲಕವಾಗಿ ದೇವರು ಅವರನ್ನು ಕರೆದನು. "ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು" (2 ಥೆಸಲೊನೀಕ 2:14) ಎಂದು ಪೌಲನು ಹೇಳಿದನು.

ಹೀಗೆ ಸುವಾರ್ತೆಯ ಮುಖಾಂತರ ದೇವರ ಕಡೆಗೆ ಕರೆಯಲ್ಪಟ್ಟ ಜನರು "ಸಭೆ" ಎಂದು ಕರೆಯಲ್ಪಟ್ಟರು (1 ಕೊರಿಂಥ 1:1-3).

ಇದಲ್ಲದೇ, ಕೊಲೊಸ್ಸೆಯಲ್ಲಿರುವ ಸಭೆಗೆ ಹೀಗೆ ಹೇಳಿದನು, "ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರ ವಾಗಿ ನಮಗೆ ಬಿಡುಗಡೆ ಯಾಯಿತು" (ಕೊಲೊಸ್ಸೆ 1:13, 14). "ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡಬೇಕು" (1 ಪೇತ್ರ 2:9ಬಿ) ಎಂದು ಪೇತ್ರನು ಹೇಳಿದನು. "ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ" (1 ಪೇತ್ರ 1:15) ಎಂದು ಪೇತ್ರನು ಹೇಳಿದನು.

ಸ್ಥಳ ಹಾಗೂ ಪ್ರತ್ಯೇಕ ಸಮಯಕ್ಕೆ ನೀಮಿತಗೊಳಿಸದೇ ಕ್ರೈಸ್ತ ಯುಗದಲ್ಲಿ ದೇವರ ಜನಾಂಗದ ಎಲ್ಲರಿಗಾಗಿ ಸಂಬಂಧಿಸಿ, "ಸಭೆ" ಎಂಬ ಪದವನ್ನು ಯೇಸು ಉಪಯೋಗಿಸಿದನು. ಇಂದು ಯಾವುದೇ ಕ್ರೈಸ್ತರು ಪಂಚಾಶತ್ತಮ ದಿನದಂದು ಸ್ಥಾಪಿಸಲ್ಪಟ್ಟ ಸಭೆಯ ಸದಸ್ಯರಾಗಿರದಿದ್ದರೂ ಎಲ್ಲಾ ಕಾಲಗಳ ಮತ್ತು ಎಲ್ಲಾ ಸ್ಥಳಗಳ ಎಲ್ಲಾ ನಿಜವಾದ ಕ್ರೈಸ್ತರು ಆ ದಿನ ಕರ್ತನು ಸ್ಥಾಪಿಸಿದ ಸಭೆಯ ಸದಸ್ಯರಾಗಿರುವರು. ಯೇಸುವಿನ ಪುನರುತ್ಥಾನದ ನಂತರ ಮೊದಲನೆಯ ಪಂಚಾಶತ್ತಮ ಹಬ್ಬದ ದಿನದಂದು ಯೆರೂಸಲೇಮಿನಲ್ಲಿ ಎಲ್ಲಾ ದಿನವಿರುವುದು. ಪ್ರತೀ ಶತಮಾನದಲ್ಲಿ ಅದು ಪುನಃ ಪುನಃ ಇಲ್ಲವೇ ಧರ್ಮಭ್ರಷ್ಟತೆಯ ಅವಧಿಯ ನಂತರ ಹುಟ್ಟಿರುವದಿಲ್ಲ.

**ಅದರ ವ್ಯವಹಾರಿಕ ಉಪಯೋಗ**

ಯೇಸುವಿನಿಂದಲೂ ಪರಿಶುದ್ಧಾತ್ಮನಿಂದಲೂ ಹೊಸ ಒಡಂಬಡಿಕೆಯಲ್ಲಿ ವ್ಯವಹಾರಿಕ ಮಾರ್ಗದಲ್ಲಿ ತರಲು "ಸಭೆ" ಎಂಬ ಪದಕ್ಕೆ ಕೊಡಲ್ಪಟ್ಟ ಅರ್ಥವನ್ನು ನಾವು ನಿರೀಕ್ಷಿಸುತ್ತೇವೆ. ಅದು ಹೀಗೆಯೇ ಇರುವದೆಂದು ನಾವು ಕಂಡುಕೊಳ್ಳುತ್ತೇವೆ.

ವ್ಯವಹಾರಿಕ ಉಪಯೋಗದಲ್ಲಿ ಪ್ರೇರೇಪಿತ ಬರಹಗಾರರು "ಸಭೆ" ಎಂಬ ಪದವನ್ನು ನಾಲ್ಕು ವಿಧಗಳಲ್ಲಿ ಉಪಯೋಗಿಸಿದರು. ಮೊದಲನೆಯದು, ಕೊಡಲ್ಪಟ್ಟ ಸ್ಥಳದಲ್ಲಿ ದೇವರ ಜನಾಂಗದ ಸಭೆಗೆ ಸಂಬಂಧಿಸಿ ಅದನ್ನು ಅವರು ಉಪಯೋಗಿಸಿದರು. ಯೇಸು ಕ್ರಿಸ್ತನಲ್ಲಿ ಶುದ್ಧೀಕರಿಸಲ್ಪಟ್ಟವರಿಗೆ, ಕೊರಿಂಥದಲ್ಲಿಯ "ದೇವರ ಸಭೆಗೆ" ಎಂದು ಪೌಲನು ಕರೆದನು (1 ಕೊರಿಂಥ 1:2). "ಫಿಲಿಪ್ಪಿಯಲ್ಲಿ ಕ್ರಿಸ್ತ ಯೇಸುವಿನ ಮೂಲಕ ದೇವರ ಜನರಾಗಿರುವವರೆಲ್ಲರಿಗೂ" (ಫಿಲಿಪ್ಪಿ 1:1) ಎಂದು ಫಿಲಿಪ್ಪಿಯದಲ್ಲಿಯ ಸಭೆಯು ಕರೆಯಲ್ಪಟ್ಟಿದೆ. "ತಂದೆಯಾದ ದೇವರಲ್ಲಿಯೂ

ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ಇರುವ ಥೆಸಲೊನೀಕದಲ್ಲಿಯ ದೇವರ ಜನರು" ಹೇಳಲ್ಪಟ್ಟಿದ್ದಾರೆ. ಕೊಡಲ್ಪಟ್ಟ ಸ್ಥಳದಲ್ಲಿಯ ಎಲ್ಲಾ ಕ್ರೈಸ್ತರು ಆ ಸ್ಥಳದ "ಸಭೆ" ಎಂದು ಕರೆಯಲ್ಪಟ್ಟಿದ್ದಾರೆ. ಸಾರ್ವತ್ರಿಕ ಸಭೆ ಎಂಬ ಹೇಳಿಕೆಯು ಕ್ರೈಸ್ತರ ಸ್ಥಳಿಕ ಸಭೆಯಾಗಿದೆ. ಒಬ್ಬನು ಕ್ರಿಸ್ತನ ಸಭೆಯ ಸದಸ್ಯನಾಗುವಾಗ ಅವನು ವಾಸಿಸುವಲ್ಲಿ ಕ್ರೈಸ್ತರ ಸಭೆಯ ಭಾಗವಾಗುವನು.

ಎರಡನೆಯದಾಗಿ, ಪ್ರೇರೇಪಿತ ಬರಹಗಾರರು "ಸಭೆ" ಎಂಬ ಪದವನ್ನು ಒಂದು ಕ್ಷೇತ್ರದ ಸ್ಥಳಿಕ ಸಭೆಗಳ ಬಗ್ಗೆ ಮಾತಾಡುವಲ್ಲಿ ಉಪಯೋಗಿಸಿದರು. "ಹೀಗಿರಲಾಗಿ ಯೂದಾಯ, ಗಲಿಲಾಯ, ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು ಸಮಾಧಾನ ಹೊಂದಿತು, ಮತ್ತು ಭಕ್ತಿಯಲ್ಲಿ ಬೆಳೆದು ಕರ್ತನ ಭಯದಲ್ಲಿ ನಡೆದು ಪರಿಶುದ್ಧಾತ್ಮನಿಂದ ಪ್ರೋತ್ಸಾಹವನ್ನು ಹೊಂದಿ ಹೆಚ್ಚುತ್ತಾ ಬಂತು" (ಅಪೊಸ್ತಲರ ಕೃತ್ಯಗಳು 9:31) ಎಂದು ಲೂಕನು ಬರೆದಿದ್ದಾನೆ. ಕೆಲವು ಸಲ ಒಂದೇ ಕ್ಷೇತ್ರದಲ್ಲಿಯ ಸಭೆಯು "ಸಭೆಗಳು" ಎಂದು ಬಹುವಚನದಲ್ಲಿ ನಾಮಾಂಕಿತಗೊಂಡಿದೆ. ಪೌಲನು ಗಲಾತ್ಯದವರಿಗೆ ಪತ್ರಿಕೆಯನ್ನು ಬರೆಯುವಾಗ, "ಗಲಾತ್ಯದಲ್ಲಿರುವ ಸಭೆಗಳಿಗೆ" ಎಂದು ಬರೆದನು (ಗಲಾತ್ಯ 1:2). ಯುರೋಪದಲ್ಲಿಯ ಸಭೆ ಇಲ್ಲವೇ ಯುರೋಪದಲ್ಲಿಯ ಸಭೆಗಳು ಎಂದು ಹೇಳುವುದು "ಸಭೆ" ಎಂಬ ಪದದ ಬೈಬಲಿಗೆ ಅನುಗುಣವಾದ ಉಪಯೋಗವಾಗಿದೆ.

ಮೂರನೆಯದು, ಸಭೆಯು ಹೇಗೆ ಮಾಡಲ್ಪಟ್ಟಿದೆ ಎಂಬುದನ್ನು ತೋರಿಸಲು "ಸಭೆ" ಎಂಬ ಪದವನ್ನು ಹೊಸ ಒಡಂಬಡಿಕೆಯ ಬರಹಗಾರರು ಉಪಯೋಗಿಸಿದ್ದಾರೆ. ಸಭೆಗಳಲ್ಲಿಯ ಜನರ ತರವನ್ನು ಕುರಿತು ಅವರು ಅದನ್ನು ಉಪಯೋಗಿಸಿದರು. ರೋಮಾಪುರ 16ರಲ್ಲಿ ತನ್ನ ವಂದನೆಯಲ್ಲಿ "ಅನ್ಯಜನರ ಸಭೆಗಳವರೆಲ್ಲರೂ" ಎಂದು ಪೌಲನು ಸಂಬಂಧಿಸಿ ಹೇಳಿದ್ದಾನೆ (ರೋಮಾಪುರ 16:3-5).

ನಾಲ್ಕನೆಯದು, ಪ್ರೇರೇಪಿತ ಬರಹಗಾರರು "ಸಭೆ" ಎಂಬ ಪದವನ್ನು ಆರಾಧನೆಗಾಗಿ ಕೂಡಿಬರುವ ಸಭೆಗೆ ಸಂಬಂಧಿಸಿ ಉಪಯೋಗಿಸಿದ್ದಾರೆ. ಆರಾಧನೆಗಾಗಿ ಕೂಡಿ ಬರದೇ ಇರುವಾಗಲೂ ಸಭೆಯು ಅಸ್ತಿತ್ವದಲ್ಲಿ ಇರುತ್ತದೆ. ಆದರೆ "ಸಭೆ" ಎಂಬ ಪದವು ಕೂಡಲ್ಪಟ್ಟ ಸ್ಥಳದಲ್ಲಿಯ ಸಭೆಯ ಕೂಟಕ್ಕಾಗಿ ವಿಶೇಷವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ, ಕೊರಿಂಥದವರು ಒಟ್ಟಾಗಿ ತಾವು ಕೂಡಿಬಂದಾಗ ಸಭೆ ಎಂದು ಪೌಲನಿಂದ ಹೇಳಲ್ಪಟ್ಟಿದ್ದಾರೆ (1 ಕೊರಿಂಥ 11:18). ಸಭೆಗಳಲ್ಲಿ ಮೌನವಾಗಿರಬೇಕೆಂದು ಅವನು ಮಹಿಳೆಯರಿಗೆ ಹೇಳಿದನು, "... ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು; ಮಾತಾಡುವದಕ್ಕೆ ಅವರಿಗೆ ಅಪ್ಪಣೆಯಿಲ್ಲ; ಅವರು ಅಧೀನದಲ್ಲಿರ ಬೇಕು; ಧರ್ಮ ಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯೆಲ್ಲಾ" (1 ಕೊರಿಂಥ 14:34). ಈ ವಾಕ್ಯ ಭಾಗದಲ್ಲಿ ಸಭೆಯ

ಆರಾಧನಾಕೂಟಕ್ಕೆ ಸಂಬಂಧಿಸಿ ಅವನು ಹೇಳಿದನು.

ಒಬ್ಬನು ಯಾವುದೇ ರೀತಿಯಲ್ಲಿ ಸಭೆಗೆ ಸಂಬಂಧಿಸುವಾಗ, ಕ್ರಿಸ್ತನ ಸುವಾರ್ತೆಗೆ ಸಮರ್ಪಿಸಿಕೊಳ್ಳುವದರಿಂದ ಕ್ರಿಸ್ತನ ದೇಹದಲ್ಲಿ ತರಲ್ಪಟ್ಟವರ ಬಗ್ಗೆ ಅವನು ಮಾತಾಡುತ್ತಿದ್ದಾನೆ. ಕ್ರೈಸ್ತನು ಭೂಲೋಕದೊ ಳಗಿಂದ ಮತ್ತು ಕತ್ತಲೆಯೊಳಗಿಂದ ಹೊರಗೆ ಕರೆಯಲ್ಪಟ್ಟಿದ್ದಾನೆ. ಹಾಗೂ ದೇವರ ಕೃಪೆಯಿಂದ "ಸಭೆ" ಎಂದು ಕ್ರಿಸ್ತನಿಂದಲೂ ಹೊಸ ಒಡಂಬಡಿಕೆಯ ಪ್ರೇರೇಪಿತ ಬರಹಗಾರರಿಂದಲೂ ಕರೆಯಲ್ಪಟ್ಟ ಸಭೆಯೊಳಗೆ ಇಡಲ್ಪಟ್ಟಿದ್ದಾರೆ.

## ಮುಕ್ತಾಯ

ತನ್ನ ಜನಾಂಗಕ್ಕೆ ಸಂಬಂಧಿಸಿ ದೇವರು ಆಯ್ದುಕೊಂಡ ಪದಗಳ ಈ ಸಂಕ್ಷಿಪ್ತ ಅಧ್ಯಯನವು ನಿಶ್ಚಯವಾಗಿಯೂ ಆತನ ರಾಜ್ಯದಲ್ಲಿ, ಆತನ ಸಭೆಯಲ್ಲಿ ಪ್ರವೇಶಿಸಲು ನಮ್ಮನ್ನು ಆಹ್ವಾನಿಸುತ್ತದೆ ಈ ಲೌಕಿಕ ಪದಗಳನ್ನು ದೇವರು ತೆಗೆದು ಕೊಂಡರು. ಅವುಗಳಿಗೆ ಹೆಚ್ಚಿನ ಅರ್ಥಕೂಡಿಸಿ, ಆತನ ಕೃಪೆಯ ಸುವಾರ್ತೆಯ ಮುಖಾಂತರ ರಕ್ಷಣೆಯೊಳಗೆ ಕರೆಯಲ್ಪಟ್ಟ ಜನರಿಗೆ ಅನ್ವಯಿಸಿದನು. ಹೀಗೆ ಈ ಪದಗಳು ದೇವರ ಆಳಿಕೆಗೆ ಸಮರ್ಪಿಸಲ್ಪಟ್ಟ ಹಾಗೂ ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟ ಎಲ್ಲರಿಗೆ ಸಂಬಂಧಿಸಿವೆ. ಪಿತೃಗಳ ದೀರ್ಘವಾದ ವರ್ಷಗಳ ಮುಖಾಂತರ ಮತ್ತು ಮೋಶೆಯ ಯುಗಗಳ ಮುಖಾಂತರ ತನ್ನ ವಿಶೇಷ ಜನಾಂಗಕ್ಕಾಗಿ ದೇವರು ಯೋಚಿಸಿದನು. ಆತನ ಸಂದೇಶವಾಹಕರು ಮುಂತಿಳಿಸಲು ಆತನು ಪ್ರೇರೇಪಿಸಿದ್ದ ಎಲ್ಲವನ್ನೂ ಆತನು ನೆರವೇರಿಸಿದನು. ಈಗ ಆತನ ರಾಜ್ಯದಲ್ಲಿ ಪ್ರವೇಶಿಸುವುದು ಮತ್ತು ಆತನ ಸಭೆಗೆ ಕೂಡಿಸಲ್ಪಡುವುದು ನಿಮಗೆ ಬಿಟ್ಟದ್ದಾಗಿರುತ್ತದೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಒಬ್ಬ ರಾಜ ಹಾಗೂ ಒಂದು ರಾಜ್ಯದ ಮಾತುಗಳಲ್ಲಿ ಇಸ್ರಾಯೇಲಿಗೆ ದೇವರೊಂದಿಗಿರುವ ಸಂಬಂಧವನ್ನು ಚರ್ಚಿಸಿರಿ.
2. ಇಸ್ರಾಯೇಲಿನ ಪ್ರಥಮ ರಾಜನಾದ ಸೌಲನಿಗೆ ದೇವರ ರಾಜ್ಯವಾದ ಇಸ್ರಾಯೇಲಿನ ಮೇಲೆ ಅರಸನಂತೆ ಯಾವ ಜವಾಬ್ದಾರಿಕೆಗಳಿದ್ದವು?
3. ಬರಲಿಕ್ಕಿರುವ ರಾಜ್ಯವನ್ನು ಕುರಿತು ದಾನಿಯೇಲನ ಪ್ರವಾದನೆಯಿಂದ ಯಾವ ಪಾಠಗಳನ್ನು ಕಲಿಯಬಹುದು? (ದಾನಿಯೇಲ 2:44 ನೋಡಿರಿ.)
4. ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಪದದ ಉಪಯೋಗ ಕಡಿಮೆಯಾದದ್ದನ್ನು

ಗಮನಿಸಿರಿ. ಇದರ ಅರ್ಥವೇನು?

5. ಇಂದು ಒಬ್ಬನು ದೇವರ ರಾಜ್ಯದಲ್ಲಿ ಇದ್ದುಕೊಂಡು ನಿತ್ಯ ರಾಜ್ಯದ ಕಡೆಗೆ ಹೇಗೆ ಮುನ್ನೋಡಬಹುದು ಎಂಬುದನ್ನು ವಿವರಿಸಿರಿ (2 ತಿಮೊಥೆ 4:18 ನೋಡಿರಿ).
6. ಹೊಸ ಒಡಂಬಡಿಕೆಯಲ್ಲಿ ಪ್ರತಿಬಿಂಬಿಸುವ "ಸಭೆ" ಎಂಬುದು ಎಷ್ಟು ಸಲ ಕಂಡು ಬರುತ್ತದೆ. ಪದದ ಬಗ್ಗೆ ಇದು ಯಾವ ಅರ್ಥವನ್ನು ಸೂಚಿಸುತ್ತದೆ?
7. ಹೊಸ ಒಡಂಬಡಿಕೆಯಲ್ಲಿ ಪ್ರತಿಬಿಂಬಿಸುವ "ಸಭೆ" ಎಂಬ ಪದದ ಸರಳ ವಾದ ಲೌಕಿಕ ಉಪಯೋಗವನ್ನು ಕೊಡಿರಿ. ಹೀಗೆ ಅದು ಉಪಯೋಗಿಸಲ್ಪಟ್ಟ ವಚನವನ್ನು ಹೇಳಿರಿ.
8. "ಸಭೆ" ಎಂಬ ಪದವು ಅದರ ಲೌಕಿಕ ಅರ್ಥದಲ್ಲಿ ಯಾವಾಗಲೂ ಧಾರ್ಮಿಕ ಕೂಟಕ್ಕೆ ಸಂಬಂಧಿಸಿರುವುದೋ? ಅದು ಯಾವಾಗಲು "ಹೊರಗೆ ಕರೆಯಲ್ಪಟ್ಟವರ ಸಭೆ," ವಿಶೇಷವಾದ ಉದ್ದೇಶಕ್ಕಾಗಿ ಒಂದಾಗಿ ಕರೆಯಲ್ಪಟ್ಟದ್ದಕ್ಕೆ ಸಂಬಂಧಿಸಿರುವುದೋ?

## ಪದ ಸಹಾಯಗಳು

ಕ್ರಿಸ್ತನ ಮದಲಗಿತ್ತಿ - ಸಭೆ, ಕ್ರಿಸ್ತನೊಂದಿಗೆ ಸಭೆಯ ಸಂಬಂಧವು ಪುರುಷನಿಗೆ ತನ್ನ ಹೆಂಡತಿಯೊಂದಿಗಿನ ಸಂಬಂಧಕ್ಕೆ ಹೋಲಿಸಲ್ಪಟ್ಟಿದೆ (ಎಫೆಸ 5:22-29 ನೋಡಿರಿ).

ಸಾಮ್ಯಗಳು - ಆತ್ಮಿಕ ಸತ್ಯಗಳನ್ನು ಉದಾಹರಿಸಲಿಕ್ಕೆ ದಿನನಿತ್ಯ ಜೀವನದಲ್ಲಿಯ ಕಥೆ ಗಳನ್ನು ಯೇಸು ಆಗಾಗ ಉಪಯೋಗಿಸಿದನು (ಮತ್ತಾಯ 13:34).

ಪಿತೃಗಳ ಯುಗ - ಬೈಬಲ್ ಚರಿತ್ರೆಯಲ್ಲಿ ಸ್ಪಷ್ಟವಾದ, ಮೂರು ಅವಧಿಗಳಲ್ಲಿ ಒಂದು, ಮೊದಲನೆಯದು ಪಿತೃಗಳ ಯುಗ. ಆಗ ದೇವರು ಕುಟುಂಬದ ಮುಖ್ಯಸ್ಥರೊಂದಿಗೆ ನೇರವಾಗಿ ಮಾತಾಡಿದನು. ಅನಂತರ ಮೋಶೆಯ ಯುಗ, ಆಗ ಇಸ್ರಾಯೇಲ್ಯರು ಮೋಶೆಗೆ ಕೊಡಲ್ಪಟ್ಟ ಧರ್ಮಶಾಸ್ತ್ರವನ್ನು (ದಶಾಜ್ಞೆಗಳ ನ್ನೊಳಗೊಂಡು) ಅನುಸರಿಸಿದರು. ಇದು ಯೇಸುವು ಶಿಲುಬೆಯ ಮೇಲೆ ಮರಣ ಹೊಂದುವವರೆಗೆ ಇತ್ತು. ಅಂತಿಮ ಯುಗವು ಕ್ರೈಸ್ತ ಯುಗವಾಗಿದೆ. ಈ ಯುಗದಲ್ಲಿ, ರಕ್ಷಿಸಲ್ಪಟ್ಟವರೆಲ್ಲರೂ ಸಭೆಗೆ ಸೇರಿಸಲ್ಪಡುತ್ತಾರೆ. ಹೊಸ ಒಡಂಬಡಿಕೆಯು ಮಾತ್ರವೇ ಬೋಧನೆಗಾಗಿಯೂ ಆರಾಧನೆಗಾಗಿಯೂ ದೈವಿಕ ಮಟ್ಟದ್ದಾಗಿರುವುದು. ಈ ಯುಗವು ಯೇಸುವಿನ ಎರಡನೆಯ ಬರೋಣದವರೆಗೆ ಇರುವುದು.

ಪ್ರವಾದನೆ - ಪ್ರವಾದಿಯ ಪ್ರೇರಿತ ಮಾತುಗಳು ದೇವರ ಚಿತ್ತದ ಪ್ರಕಟನೆಯಂತೆ ದೃಷ್ಟಿಸಲ್ಪಟ್ಟಿವೆ, ಕೆಲವು ಸಲ ದೈವೀಯ ಪ್ರೇರಣೆಯಿಂದ ಭವಿಷ್ಯವು ಮುಂತಿಳಿಸಲ್ಪಡುತ್ತದೆ.

ಸಮುವೇಲ - ಹಳೇ ಒಡಂಬಡಿಕೆಯ ಮಹಾ ಪ್ರವಾದಿ, ಯಾಜಕ ಹಾಗೂ ನ್ಯಾಯಸ್ಥಾಪಕ.

ಸಾರ್ವಭೌಮ - ಅರಸ ಇಲ್ಲವೇ ಇತರ ಆಡಳಿತೆಗಾರ, ಅತೀ ದೊಡ್ಡ ಬಲವುಳ್ಳವನು. 1 ತಿಮೊಥೆ 6:14, 15ರಲ್ಲಿ ಕರ್ತನಾದ ಯೇಸು ಕ್ರಿಸ್ತನು "ಭಾಗ್ಯವಂತನಾದ ಏಕಾಧಿತಿ, ರಾಜಾಧಿ ರಾಜನೂ ಕರ್ತನ ಕರ್ತನೂ" ಆಗಿದ್ದಾನೆಂದು ಹೇಳಲ್ಪಟ್ಟಿದೆ.

## ಹೊಸ ಒಡಂಬಡಿಕೆಯ ಸಭೆ

| ಸಂಸ್ಥಾಪಕರು: ಕ್ರಿಸ್ತ<br>ಮತ್ತಾಯ 16:18 | ಎಲ್ಲಿ: ಯೆರೂಸಲೇಮಿನಲ್ಲಿ<br>ಯೆಶಾಯ 2:3;<br>ಅಪೊಸ್ತಲರ ಕೃತ್ಯಗಳು2:5,47    ಯಾವಾಗ: ಕ್ರಿ.ಶ. 33<br>ಅಪೊಸ್ತಲರ ಕೃತ್ಯಗಳು 2    ಶಿರಸ್ಸು: ಕ್ರಿಸ್ತ<br>ಎಫೆಸ 1:22 |
|---|---|
| ಸಂಘಟನೆ<br>ಫಿಲಿಪ್ಪಿ 1:1 | ಹಿರಿಯರು: ತೀತ 1:5; 1 ಪೇತ್ರ 5:1-3; ಅಪೊಸ್ತಲರ ಕೃತ್ಯಗಳು 20:28; 1 ತಿಮೊಥೆ 3:1-7; ಡೀಕನರು: ಅಪೊಸ್ತಲರ ಕೃತ್ಯಗಳು 6:1-6; 1 ತಿಮೊಥೆ 3:8-13; ಸದಸ್ಯರು: ಅಪೊಸ್ತಲರ ಕೃತ್ಯಗಳು 2:41-47; ಕೊಲೊಸ್ಸೆ 1:13; 1 ಕೊರಿಂಥ 1:2 |
| ಸಭೆಗಾಗಿ ಅಂಕಿತಗಳು<br>ಎಫೆಸ 3:15 | ಸಭೆ: ಕೊಲೊಸ್ಸೆ 1:18, 24; ಕ್ರಿಸ್ತನ ದೇಹ: ಎಫೆಸ 1:22, 23; ರಾಜ್ಯ: ಅಪೊಸ್ತಲರ ಕೃತ್ಯಗಳು 8:12; ಕ್ರಿಸ್ತನ ಸಭೆಗಳು: ರೋಮಾಪುರ 16:16; ದೇವರ ಸಭೆ: 1 ಕೊರಿಂಥ 1:2; ಅಪೊಸ್ತಲರ ಕೃತ್ಯಗಳು 20:28; ದೇವರ ಕುಟುಂಬ: ಎಫೆಸ 2:19; 1 ತಿಮೊಥೆ 3:15; ಕರ್ತನ ಶಿಷ್ಯರು: ಅಪೊಸ್ತಲರ ಕೃತ್ಯಗಳು 9:1; ದೇವರ ಆಲಯ: 1 ಕೊರಿಂಥ 3:16; ಚೊಚ್ಚಲ ಮಕ್ಕಳ ಸಭೆ: ಇಬ್ರಿಯ 12:23 |
| ಕ್ರೈಸ್ತರಿಗಾಗಿ ಅಂಕಿತಗಳು<br>ಎಫೆಸ 3:15 | ಶಿಷ್ಯರು: ಅಪೊಸ್ತಲರ ಕೃತ್ಯಗಳು 11:26; ಪರಿಶುದ್ಧರು: 1 ಕೊರಿಂಥ 1:2; ಫಿಲಿಪ್ಪಿ 1:1; ದೇವರ ಮಕ್ಕಳು ಗಲಾತ್ಯ 3:26; 1 ಯೋಹಾನ 2:1; ಸಹೋದರರು: ಲೂಕ 8:21; ಗಲಾತ್ಯ 6:1; ಕ್ರೈಸ್ತರು: ಅಪೊಸ್ತಲರ ಕೃತ್ಯಗಳು 11:26; 26:28; 1 ಪೇತ್ರ 4:16 |
| ವಿಶ್ವಾಸ ಸೂತ್ರ | ಯೇಸು ಕ್ರಿಸ್ತ: ಮತ್ತಾಯ 16:16-18; ಅಪೊಸ್ತಲರ ಕೃತ್ಯಗಳು 8:37 |
| ವಿಶ್ವಾಸದ ಮತ್ತು<br>ಆಚರಣೆಗಳ ನಿಯಮ:<br>ದೇವರ ವಾಕ್ಯ | ಎಲ್ಲಾ ಅಧಿಕಾರ: ಮತ್ತಾಯ 28:18-20; ರೋಮಾಪುರ 1:16; ಇಬ್ರಿಯ 4:12; ಸಭೆಯ ಆಡಳಿತೆ: 2 ತಿಮೊಥೆ 3:16, 17; 2 ಪೇತ್ರ 1:3; ರಾಜ್ಯದ ಬೀಜ: ಮತ್ತಾಯ 13:3; ಲೂಕ 8:11; ಆತ್ಮಿಕ ಖಡ್ಗ: ಎಫೆಸ 6:17 |
| ಆರಾಧನೆ | ಹಾಡುವುದು: ಕೊಲೊಸ್ಸೆ 3:16; ಪ್ರಾರ್ಥನೆ: 1 ಥೆಸಲೊನೀಕ 5:17; ಬೋಧನೆ: ಅಪೊಸ್ತಲರ ಕೃತ್ಯಗಳು 20:7; ಅನ್ಯೋನ್ಯತೆ: ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 11:23; ಕೊಡುಗೆ: 1 ಕೊರಿಂಥ 16:1, 2 |
| ಸೇವೆ | ಆತ್ಮಗಳನ್ನು ರಕ್ಷಿಸುವುದು: ಮತ್ತಾಯ 28:18-20; ಯೋಹಾನ 6:45; ಎಫೆಸ 3:10; 1 ತಿಮೊಥೆ 4:16 |
| ಎಚ್ಚರಿಕೆ | ಸತ್ಯದಲ್ಲಿ ನೆಲೆಗೊಳ್ಳಿರಿ: ಗಲಾತ್ಯ 1:6-8; ಮತ್ತಾಯ 15:9, 13; 2 ಕೊರಿಂಥ 11:3; ಪ್ರಕಟನೆ 22:18, 19; 2 ಯೋಹಾನ 9 |